ಲಿಖಿತ ಮೂಲಕ ಉತ್ತರಿಸುವ ಪ್ರಶ್ನೆ

**ಕರ್ನಾಟಕ ವಿಧಾನ ಪರಿಷತ್ತು**

ನೂರ ನಲವತ್ತೆರಡನೆಯ ಅಧಿವೇಶನ

ಸೋಮವಾರ, ದಿನಾಂಕ: 14ನೇ ಡಿಸೆಂಬರ್, 2020

ಕೋವಿಡ್-19 ಸಂದರ್ಭದಲ್ಲಿ ವೈದ್ಯಕೀಯ ಉಪಕರಣಗಳ ಖರೀದಿ

ಶ್ರೀ ಕೆ.ಎ. ತಿಪ್ಪೇಸ್ವಾಮಿ (ನಾಮನಿರ್ದೇಶನ ಹೊಂದಿದವರು):-

604(812) ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಮತ್ತು ವೈದ್ಯಕೀಯ ಶಿಕ್ಷಣ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:-

(ಅ) ಜನವರಿ, 2020 ಮಾಹೆಯಿಂದ ಸರ್ಕಾರವು ಎಷ್ಟು ವೆಂಟಿಲೇಟರ್‌ಗಳು, ಪಿಪಿಇ ಉಪಕರಣಗಳು ಮತ್ತು ಕೈ ಗವಸುಗಳನ್ನು ಖರೀದಿಸಿದೆ; (ಮಾಹೆವಾರು ಮಾಹಿತಿ ನೀಡುವುದು)

(ಆ) ಈ ಉಪಕರಣಗಳನ್ನು ಖರೀದಿಸಲು ಸರ್ಕಾರ ವ್ಯಯಿಸಿದ ಒಟ್ಟು ಮೊತ್ತವೆಷ್ಟು; (ವಸ್ತುವಾರು ಮಾಹಿತಿ ಒದಗಿಸುವುದು)

(ಇ) ಕೋವಿಡ್-19 ಸಾಂಕ್ರಾಮಿಕ ರೋಗದ ವಿರುದ್ಧ ಕ್ರಮ ಕೈಗೊಳ್ಳಲು ಕೇಂದ್ರ ಸರ್ಕಾರ ರಾಜ್ಯದ ವಿವಿಧ ಆಸ್ಪತ್ರೆಗಳಿಗೆ ಎಷ್ಟು ವಿಶೇಷ ಅನುದಾನ ಮತ್ತು ಬಹು ವೈದ್ಯಕೀಯ ಉಪಕರಣಗಳನ್ನು ಒದಗಿಸಿದೆ;

(ಈ) ರಾಜ್ಯದ ಆಸ್ಪತ್ರೆಗಳಿಗೆ ಎಷ್ಟು ಸಂಖ್ಯೆಯ ಬಹು ವೈದ್ಯಕೀಯ ಉಪಕರಣಗಳನ್ನು ಸರಬರಾಜು ಮಾಡಲಾಗಿದೆ ಮತ್ತು ಈ ಉಪಕರಣಗಳ ಒಟ್ಟು ಮೌಲ್ಯವೆಷ್ಟು? (ಜಿಲ್ಲಾವಾರು ಮಾಹಿತಿ ನೀಡುವುದು)